4) ನೀರು ಸೋರುವಿಕೆ ತಡೆಗಟ್ಟಲು ದಿನದ 24 ತಾಸುಗಳು ವಿಶೇಷ ಕಾರ್ಯಪಡೆ ನಿಯೋಜನೆ

5) ರಸ್ತೆ ಮಧ್ಯದಲ್ಲಿ ಹಾದು ಹೋಗುತ್ತಿರುವ ಕೊಳವೆಗಳನ್ನು ರಸ್ತೆ ಬದಿಗೆ ಸ್ಥಳಾಂತರಿಸುವುದು.

6) ದೋಷಪೂರಿತ ಮಾಪನಗಳನ್ನು ಬದಲಾಯಿಸುವುದು

7) ಅನಧಿಕೃತ ನೀರಿನ ಸಂಪರ್ಕಗಳನ್ನು ಗುರುತಿಸಿ ಅಧಿಕೃತಗೊಳಿಸುವುದು.

8) ಜಪಾನ್ ಬ್ಯಾಂಕ್ ಸಹಯೋಗದೊಂದಿಗೆ ರೂ. 400 ಕೋಟಿ ಮತ್ತು ಭಾರತ ಸರ್ಕಾರದ ಜೆ.ಎನ್.ಎನ್.ಯು.ಆರ್.ಎಂ. ಯೋಜನೆಯಡಿ ರೂ. 300 ಕೋಟಿ ಮೊತ್ತದಲ್ಲಿ ನಗರದಲ್ಲಿರುವ ಹಳೆಯ ತುಕ್ಕು ಹಿಡಿದ ನೀರಿನ ಕೊಳವೆಗಳು, ಗೃಹ ಸಂಪರ್ಕಗಳು ಮತ್ತು ನೆಲಮಟ್ಟದ ಜಲಾಶಯಗಳನ್ನು ಬದಲಾಯಿಸಲು/ಪುನರ್‌ರೂಪಿಸಲು ಬೃಹತ್ ಯೋಜನೆ ಹಮ್ಮಿಕೊಳ್ಳಲಾಗಿದೆ.

9) ಗೃಹಗಳಿಗೆ ನೀರು ಸಂಪರ್ಕ ಕಲ್ಪಿಸುವ ಜಿ.ಐ ಕೊಳವೆ ಉಪಯೋಗಿಸುವ ಬದಲಾಗಿ ಪಿ.ಎ.ಸಿ.ಪಿ ಕ್ಲಾಸ್ ಪುಡ್‌ಗ್ರೇಡ್ ಕೊಳವೆಗೆ ಹೊರ ಕವಚ ಕೊಳವೆಯೊಂದಿಗೆ ಅಳವಡಿಸಲು ಮಾರ್ಪಾಡು ಮಾಡಲಾಗುತ್ತಿದೆ.

10) ನಗರದ ವಿವಿಧ ಸ್ಥಳಗಳಲ್ಲಿರುವ ಉನ್ನತ ವ್ಯಾಸದ ಕೊಳವೆಗಳಲ್ಲಿ ಹರಿಯುತ್ತಿರುವ ನೀರಿನ ಪ್ರಮಾಣ ಲೆಕ್ಕಿಸುವ ಪ್ರಯುಕ್ತ ಸಗಟು ಮಾಪನಗಳನ್ನು ಜೆ.ಎನ್.ಎನ್.ಯು.ಆರ್.ಎಂ. ಪದಕದಡಿ ರೂ. 17 ಕೋಟಿ ವೆಚ್ಚದಲ್ಲಿ ಅಳವಡಿಸಲು ಯೋಜನೆ ರೂಪಿಸಿ, ಕೈಗೆತ್ತಿಕೊಳ್ಳಲಾಗುತ್ತದೆ.

1956 (2013) ಶ್ರೀ ನರಸಿಂಹಸ್ವಾಮಿ ಜೆ. (ದೊಡ್ಡಬಳ್ಳಾಪುರ) :– ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೊಡ್ಡಬಳ್ಳಾಪುರ ತಾಲ್ಲೂಕು ತೂಬಗೆರೆ ಮತ್ತು ಗುಂಡಂಗೆರೆ ಹೊಸಹಳ್ಳಿ ಬಳಿ ಓಜೋನಹಳ್ಳಿ ವಿದ್ಯುತ್ ಉಪ ಕೇಂದ್ರದ ಸ್ಥಾಪನೆ ಈಗ ಯಾವ ಹಂತದಲ್ಲಿದೆ;

ಆ) ಇದನ್ನು ಪ್ರಾರಂಭಿಸಲು ಸರ್ಕಾರ ವಿಳಂಬ ನೀತಿ ಅನುಸರಿಸುತ್ತಿರುವುದು ಸರಿಯೆ;

ಇ) ಹಾಲಿ ತೊಂಡೆ ಬಾವಿ ವಿದ್ಯುತ್ ಉಪ ಕೇಂದ್ರದಿಂದ ಸರಬರಾಜು ಆಗುತ್ತಿರುವ ಎಫ್-8 ಲೈನ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಲೈನ್‌ಮ್ಯಾನ್‌ಗಳ ಸಂಖ್ಯೆ ಎಷ್ಟು ಹಾಗೂ ಅವರ ದೈಹಿಕ ಅರ್ಹತೆ ಬಗ್ಗೆ ಸರ್ಕಾರ ಗಮನಹರಿಸಿದೆಯೇ;

ಈ) 16 ಕಿ.ಮೀ. ಪ್ರಾಥಮಿಕ ವಿದ್ಯುತ್ ಲೈನ್ ಇರುವುದಲ್ಲದೆ ಸುಮಾರು 115 ವಿದ್ಯುತ್ ಪರಿವರ್ತನೆಗಳು ಹಾಗೂ 750 ವಿದ್ಯುತ್ ಬಳಕೆದಾರರ ಕೊಳವೆ ಬಾವಿಗಳಿರುವುದರಿಂದ ದೈಹಿಕ ಸಾಮರ್ಥ್ಯವನ್ನು ಕಳೆದುಕೊಂಡಿರುವ ಈ ಲೈನ್‌ಮ್ಯಾನ್‌ಗಳಿಂದ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ದೊಡ್ಡಬಳ್ಳಾಪುರ ತಾಲ್ಲೂಕಿನ ತೂಬಗೆರೆ ಗ್ರಾಮದಲ್ಲಿ 66/11 ಕೆ.ವಿ. ವಿದ್ಯುತ್ ಉಪ ಕೇಂದ್ರದ ಕಾಮಗಾರಿಗಳು ಮುಕ್ತಾಯ ಹಂತದಲ್ಲಿದ್ದು 15 ನೇ ಏಪ್ರಿಲ್ 2007 ರ ವೇಳೆಗೆ ಸದರೀ ವಿದ್ಯುತ್ ಉಪಕೇಂದ್ರವನ್ನು ಚಾಲನೆಗೊಳಿಸುವ ಗುರಿಯನ್ನು ಹೊಂದಿದೆ. ಇದೇ ತಾಲ್ಲೂಕಿನ ಗುಂಡಂಗೆರೆ ಹೊಸಹಳ್ಳಿ ಬಳಿ ಓಜೋನಹಳ್ಳಿಯಲ್ಲಿ ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸಲು ಕಾಮಗಾರಿಯ ಗುತ್ತಿಗೆಯನ್ನು ಗುತ್ತಿಗೆದಾರರಿಗೆ ಈಗಾಗಲೇ ವಹಿಸಲಾಗಿದೆ. ಪೂರ್ವಭಾವಿ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದ್ದು, ಕಾಮಗಾರಿಯನ್ನು ಸಧ್ಯದಲ್ಲಿಯೇ ಪ್ರಾರಂಭಿಸಲಾಗುವುದು.

ಆ) ಗುಂಡಂಗೆರೆ ಹೊಸಹಳ್ಳಿ ಬಳಿ ಓಜೋನಹಳ್ಳಿಯಲ್ಲಿ ವಿದ್ಯುತ್ ಉಪ ಕೇಂದ್ರದ ಸ್ಥಾಪನೆಗೆ ವಿವಿಧ ನಕ್ಷೆಗಳ ತಯಾರಿಕೆ ಹಾಗೂ ಮಂಜೂರಾತಿ ಮತ್ತು ಒಂದು ಕೊಳವೆ ಬಾವಿ ಕೊರೆಯುವಿಕೆ ಮುಂತಾದ ಪೂರ್ವಭಾವಿ ಸಿದ್ಧತೆಗಳನ್ನು ಗುತ್ತಿಗೆದಾರರು ಮಾಡುತ್ತಿದ್ದಾರೆ. ಸದರೀ ವಿದ್ಯುತ್ ಉಪಕೇಂದ್ರಕ್ಕೆ ಸಂಬಂಧಿಸಿದ 66 ಕೆ.ವಿ ವಿದ್ಯುತ್ ಪ್ರಸಾರಣಾ ಮಾರ್ಗದ ಚೆಕ್ ಸರ್ವೆ ಕಾರ್ಯವೂ ಸಹ ಪ್ರಗತಿಯಲ್ಲಿದೆ. ಆದುದರಿಂದ ಕಾಮಗಾರಿಯನ್ನು ಪ್ರಾರಂಭಿಸುವಲ್ಲಿ ವಿಳಂಬನೀತಿ ಅನುಸರಿಸುತ್ತಿಲ್ಲ.

ಇ) ತೊಂಡೆಬಾವಿ ವಿದ್ಯುತ್ ಉಪ ಕೇಂದ್ರದಿಂದ ಸರಬರಾಜಾಗುತ್ತಿರುವ ಎಫ್-8 ಲೈನ್‌ನಲ್ಲಿ ಒಬ್ಬ ಲೈನ್‌ಮೆನ್ ಕಾರ್ಯನಿರ್ವಹಿಸುತ್ತಿದ್ದು, ಇವರು ದೈಹಿಕವಾಗಿ ಅರ್ಹರಾಗಿರುತ್ತಾರೆ.

ಈ) ತೊಂಡೆಬಾವಿ ವಿದ್ಯುತ್ ಉಪ ಕೇಂದ್ರದಿಂದ ಸರಬರಾಜಾಗುತ್ತಿರುವ ಎಫ್-8 ಫೀಡರ್ 26 ಕಿ.ಮೀ ಉದ್ದ ಇದ್ದು, ಇದರ ಮೇಲೆ 117 ವಿದ್ಯುತ್ ಪರಿವರ್ತಕಗಳು ಇರುತ್ತವೆ. ದೊಡ್ಡಬಳ್ಳಾಪುರ ತಾಲ್ಲೂಕು ನಾಸಲು ಹೋಬಳಿಯಲ್ಲಿ ಬರುವ ಬಂಕೇನಹಳ್ಳಿ, ಹೊಸಕೋಟೆ ವಾಬಸಂದ್ರ, ಮಾಕಳಿ ಸೊಣ್ಣೇನಹಳ್ಳಿ ಗುಂಡಂಗೆರೆ ಹೊಸಹಳ್ಳಿ, ಮಲ್ಲಸಂದ್ರ, ಉಜ್ಜನಿ, ಕೊಟ್ಟಿಗೇ ಮಾಚೇನಹಳ್ಳಿ, ಜಕ್ಕೇನಹಳ್ಳಿ, ಕಟ್ಟೆಹಿಂದ್ಲಹಳ್ಳಿ, ಕಲ್ಲುಕುಂಟೆ ಇತ್ಯಾದಿ ಗ್ರಾಮಗಳಿಗೆ ಸದರಿ ಫೀಡರಿನಿಂದ ವಿದ್ಯುತ್ ಸರಬರಾಜು ಆಗುತ್ತಿದೆ. ಇದಕ್ಕೆ ಸಂಬಂಧಪಟ್ಟಂತೆ

ಒಬ್ಬರೇ ಲೈನ್‌ಮೆನ್ ಇದ್ದು, ಅವರು ಕೆಲಸವನ್ನು ಸಾಧ್ಯವಾದಷ್ಟು ಮಟ್ಟಿಗೆ ಸಮರ್ಪಕವಾಗಿ ನಿರ್ವಹಿಸುತ್ತಿದ್ದಾರೆ.

ಉ) ಒಬ್ಬ ಲೈನ್‌ಮನ್ ಗೆ ಕೆಲಸದ ಹೊರೆ ತೀರ ಹೆಚ್ಚಾಗಿರುವುದರಿಂದ ಹೆಚ್ಚಿನ ಲೈನ್‌ಮನ್‌ಗಳನ್ನು ನಿಯುಕ್ತಿಗೊಳಿಸಲಾಗುವುದು.

1958 (2378) ಶ್ರೀ ಪಾಟೀಲ್ ಡಿ. ಆರ್. :– ಮಾನ್ಯ ಯುವಜನಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಜಿಲ್ಲೆ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಕ್ರೀಡಾಂಗಣ ನಿರ್ಮಾಣಕ್ಕಾಗಿ ಬಿಡುಗಡೆ ಮಾಡಿರುವ ಹಣ ಎಷ್ಟು; (ಕ್ಷೇತ್ರವಾರು ಹಾಗೂ ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಗದಗ ಜಿಲ್ಲೆಯ ಬೆಟಗೇರಿ ನಗರದಲ್ಲಿರುವ ಕ್ರೀಡಾಂಗಣಕ್ಕಾಗಿ ಮೀಸಲಿಟ್ಟಿರುವ ಜಾಗದಲ್ಲಿ ತಾಲ್ಲೂಕು ಮಟ್ಟದ ಕ್ರೀಡಾಂಗಣ ನಿರ್ಮಾಣ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಇ) ಅದಕ್ಕಾಗಿ 2006–07 ಮತ್ತು 2007–08 ರ ಹಣಕಾಸು ವರ್ಷದಲ್ಲಿ ಅನುದಾನ ಬಿಡುಗಡೆ ಮಾಡಲಾಗುವುದೇ?

ಶ್ರೀ ಹನುಮಂತಪ್ಪ ವೈ. ಆಲ್ಕೋಡ್ (ಯುವಜನಸೇವಾ ಹಾಗೂ ಕ್ರೀಡಾ ಸಚಿವರು):

ಅ) ಜಿಲ್ಲಾ ಕ್ರೀಡಾಂಗಣಗಳಿಗೆ ಬಿಡುಗಡೆಯಾದ ಮೊತ್ತದ ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ. 2006–07 ನೇ ಸಾಲಿನಲ್ಲಿ ಪೂರ್ಣಗೊಳಿಸಲು ತೆಗೆದುಕೊಂಡಿರುವ 63 ಅಪೂರ್ಣವಾಗಿರುವ ತಾಲ್ಲೂಕು ಕ್ರೀಡಾಂಗಣಗಳಿಗೆ 12 ನೇ ಹಣಕಾಸು ಆಯೋಗದ ಧನ ಸಹಾಯವು ಸೇರಿ ವಿವಿಧ ಮೂಲಗಳಿಂದ ಬಿಡುಗಡೆಯಾಗಿರುವ ಹಣದ ವಿವರಗಳನ್ನು ಅನುಬಂಧ–2 ರಲ್ಲಿ ನೀಡಲಾಗಿದೆ.

ಆ) ನೂತನ ಜಿಲ್ಲೆಯಾದ ಗದಗ್ ಜಿಲ್ಲೆಯ ಜಿಲ್ಲಾ ಕೇಂದ್ರ ಸ್ಥಾನವಾದ ಗದಗ–ಬೆಟಗೇರಿಯಲ್ಲಿ ಜಿಲ್ಲಾ ಮಟ್ಟದ ಕ್ರೀಡಾಂಗಣ ನಿರ್ಮಾಣ ಕಾರ್ಯ ಕೈಗೊಳ್ಳಲಾಗಿದೆ. ಜಿಲ್ಲಾ ಕೇಂದ್ರ ಸ್ಥಳಗಳಲ್ಲಿ ಜಿಲ್ಲಾ ಮಟ್ಟದ ಕ್ರೀಡಾಂಗಣವನ್ನು ನಿರ್ಮಿಸುತ್ತಿರುವುದರಿಂದ ಅಲ್ಲಿ ಪ್ರತ್ಯೇಕವಾದ ತಾಲ್ಲೂಕು ಮಟ್ಟದ ಕ್ರೀಡಾಂಗಣವನ್ನು ನಿರ್ಮಿಸುವ ಯೋಜನೆ ಇರುವುದಿಲ್ಲ.

ಇ) ಉದ್ಭವಿಸುವುದಿಲ್ಲ.